**ದಿನಾಂಕಃ 06.07.2026 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದಃ–**

1. ಕಳೆದ ಬಾರಿ ನ್ಯಾಯಾಲಯದಲ್ಲಿ ನಮ್ಮ ಹೆಣ್ಣು ಮಕ್ಕಳು ದಾವೆ ಹೂಡಿರುವ ಬಗ್ಗೆ ದಾಖಲೆಯನ್ನು ಕೊಟ್ಟಿದ್ದೇನೆ. ಸದರಿ ದಾವೆಯು ಏನಾಗಿದೆ ಎಂದು ನನಗೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ:87/2018 ರಲ್ಲಿರುವ ವಾದಿಗಳು ನನ್ನ ಅಕ್ಕ–ತಂಗಿಯರು. ಪ್ರತಿವಾದಿಗಳು ನಾನು ಮತ್ತು ನನ್ನ ಅಣ್ಣ–ತಮ್ಮಂದಿರಾಗಿರುತ್ತಾರೆ. ಅಸಲು ದಾವೆ ಸಂಖ್ಯೆ:87/2018 ರ 5 ನೇ ಪ್ರತಿವಾದಿ ಈ ದಾವೆಯ ವಾದಿಯಾಗಿದ್ದಾರೆ. ನಾನು ಮತ್ತು ನನ್ನ ಅಣ್ಣ ಮಹಲಿಂಗಪ್ಪ ಅಸಲು ದಾವೆ ಸಂಖ್ಯೆ:87/2018 ರಲ್ಲಿ ಲಿಖಿತ ಕರಾರನ್ನು ಸಲ್ಲಿಸಿಲ್ಲ ಎಂದರೆ ಸರಿ.

2. ಅಸಲು ದಾವೆ ಸಂಖ್ಯೆ:87/2018 ರ ಪ್ರತಿವಾದಿ 1 ಮತ್ತು 4 ರವರು ಈಗಾಗಲೇ ದಾವಾ ಐಟಂ ನಂಃ5 ನ್ನು 5 ನೇಪ್ರತಿವಾದಿ ಅಂದರೆ ಈ ದಾವೆಯ ವಾದಿಗೆ ಮಾರಾಟ ಮಾಡಿರುವುದಾಗಿ ಪ್ರತಿವಾದ ಪತ್ರ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಐಟಂ ನಂಃ5 ರ ಸ್ವತ್ತನ್ನು ಈ ದಾವೆಯ ವಾದಿಗೆ ಸ್ವಾಧೀನವನ್ನೂ ಸಹ ಬಿಟ್ಟುಕೊಟ್ಟಿರುವುದಾಗಿ ಹೇಳಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವೆ ಸಂಖ್ಯೆ:87/2018 ರಲ್ಲಿ ಮುಂದುವರಿದು ಪ್ರತಿವಾದಿ 1 ಮತ್ತು 4 ರವರು 5 ನೇ ಪ್ರತಿವಾದಿಗೆ ಮಾರಾಟ ಮಾಡಿದ ಸ್ವತ್ತನ್ನು ಹೊರತುಪಡಿಸಿ ಉಳಿದ ಸ್ವತ್ತುಗಳಲ್ಲಿ ಭಾಗ ಕೊಡಲು ತೊಂದರೆ ಇಲ್ಲ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ:87/2018 ರ ತೀರ್ಪಿನ ವಿರುದ್ಧ ಈ ದಾವೆಯ ವಾದಿ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಮೇಲ್ಮನವಿ ನೋಟೀಸ್ ನನಗೆ ಜಾರಿಯಾಗಿದೆ. ದಾವಾ ಸ್ವತ್ತಿನ ಸ್ವಾಧೀನತೆಯನ್ನು ಈಗಾಗಲೇ ವಾದಿಗೆ ನೀಡಿರುವ ಕಾರಣ ನಾನು ದಾವಾ ಸ್ವತ್ತಿನಲ್ಲಿ ಯಾವುದೇ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.